ಶ್ರೀ ಹೆಚ್.ಡಿ. ಬಸವರಾಜು:– ತಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರ. ಆಕ್ಷನ್ ತೆಗೆದುಕೊಂಡಿಲ್ಲವಲ್ಲ ಸಾರ್ ಇವತ್ತಿಗೂ ಕೂಡ ನಾವು ಆ ಅಕಾಡೆಮಿಕ್ ಕೌನ್ಸಿಲ್‌ಗೆ ಹೋಗಿ ಮೀಟಿಂಗ್‌ನಲ್ಲಿ ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ 6 ಜನ ಖ್ಯಾತ ಶಿಕ್ಷಣತಜ್ಞರು. ಅವರಲ್ಲಿ ಅನುಸೂಚಿತ ಜಾತಿ, ಇತರೆ ಹಿಂದುಳಿದವರು, ಮಹಿಳೆಯರು, ಧಾರ್ಮಿಕ ಅಲ್ಪಸಂಖ್ಯಾತರು, ವಾಣಿಜ್ಯ, ಬ್ಯಾಂಕಿಂಗ್, ಕೈಗಾರಿಕೆ ಇತರೆ ವ್ಯಕ್ತಿಗಳ ಪೈಕಿ... ಎಂದು ಈ ರೀತಿ ಇದೆ. ಆದ್ದರಿಂದ, ಈ ನೇಮಕ ಮಾಡಿರುವವರು ಅಕಾಡೆಮಿಕ್ ಕೌನ್ಸಿಲ್ ಸ್ಟಾಂಡರ್ಡ್‌ಗೆ ಇರತಕ್ಕಂಥವರಲ್ಲವೆಂದು ಪತ್ರಿಕೆಗಳಲ್ಲಿ, ಪಬ್ಲಿಕ್‌ನಲ್ಲಿ ಚರ್ಚೆಯಾಗುತ್ತಿದೆ.

ಶ್ರೀ ಡಿ, ಮಂಜುನಾಥ್:– ಪತ್ರಿಕೆಗಳಲ್ಲಿ ಬರೆಯುವುದು ಬರೆದಿರಬಹುದು ಆದರೆ, ಇನ್ನೂ ಮಾಡಿಲ್ಲ. ಮಾಡಬೇಕಾದರೆ ಈಗ ಕಾನೂನು ಪ್ರಕಾರ ಮಾಡುತ್ತೇವೆ.

ಶ್ರೀ ನೆ.ಲ. ನರೇಂದ್ರ ಬಾಬು:– ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಕಟ್ಟಿರತಕ್ಕಂಥ ನಮ್ಮ ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ 210 ಮನೆಗಳು ಬೀಳುವ ಸ್ಥಿತಿಯಲ್ಲಿವೆ. ಬಿದ್ದು ದೊಡ್ಡ ಅನಾಹುತವಾದರೆ, ಇಡೀ ಜನಪ್ರತಿನಿಧಿಗಳೂ ಆ ಬಡಾವಣೆ ಇರಬಹುದು, ರಾಜ್ಯದಲ್ಲಿ ನಾವು ತಲೆತಗ್ಗಿಸುವಂಥ ಸ್ಥಿತಿ ಇದೆ. ಈಗಾಗಲೇ ಕೊಳಚೆ ನಿರ್ಮೂಲನಾ ಮಂಡಳಿಗೆ, ಸರ್ಕಾರಕ್ಕೆ ನಾನು ಪತ್ರವನ್ನು ಬರೆದಿದ್ದೇನೆ. ಅದರಲ್ಲಿ ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಇವತ್ತು ಅಲ್ಲಿ 210 ಮನೆಗಳೇನಿವೆ, ಅವುಗಳೂ ಸ್ಥಳೀಯ ಸಂಸ್ಥೆಗೆ ವರ್ಗಾವಣೆ ಆಗಿವೆ. ಆದುದ್ದರಿಂದ, ನಮಗೂ, ಇದಕ್ಕೂ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಉತ್ತರವಿದೆ. ನಾನು ಸಂಬಂಧಪಟ್ಟ ಕಮಿಷನರ್ ಹತ್ತಿರ ಹಲವಾರು ಬಾರಿ ಸುಮಾರು 10 ರಿಂದ 15 ಸಾರಿ ಚರ್ಚೆ ಮಾಡಿ, ಅವರೂ ಸ್ಪಾಟ್ ಇನ್ಸ್‌ಪೆಕ್ಟ್ ಮಾಡಿ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಂಥದ್ದರಲ್ಲಿ ಯಾವಾತ್ತಾದರೂ ಅಲ್ಲಿ ಬಿದ್ದು ಸಾವಿರಾರು ಜನ ಬೀದಿ ಪಾಲಾಗುತ್ತಾರೆ. ಜೊತೆಗೆ, ಪ್ರಾಣಕ್ಕೆ ಹಾನಿಯಾಗಿದೆ ಎಂದು ನಾನು ತಿಳಿಸಿದ್ದೆ. ಈ ಉತ್ತರದಲ್ಲಿ ಈ ಮನೆ ಕಟ್ಟಿದ್ದು 82–83ರಲ್ಲಿ, ಗುಂಡೂರಾವ್ ಕಾಲೋನಿ ಎಂದು ಹೇಳಿ ಅಗ್ರಹಾರ ದಾಸರಹಳ್ಳಿಯಲ್ಲಿ ಇಂಡಸ್ಟ್ರಿಯಲ್ ಟೌನ್ ವಾರ್ಡ್ ರಾಜಾಜಿನಗರ ವಿಧಾನ ಸಭಾಕ್ಷೇತ್ರದಲ್ಲಿ 82–83ರಲ್ಲಿ ಕಟ್ಟಿದ್ದಂಥ ಮನೆಯನ್ನು 1997ರಲ್ಲಿ ಬೆಂಗಳೂರು ಮಹಾನಗರಪಾಲಿಕೆಗೆ ವರ್ಗಾಯಿಸಲಾಯಿತೆಂದು

ಹೇಳುತ್ತಾರೆ. ಅದೇ ಉತ್ತರದಲ್ಲಿ, 2002–03ರಲ್ಲಿ ಸ್ಟಾರ್ ಸ್ಟೀಲ್ ಇಂಡಿಯಾದವರು ಈ ಬಿಲ್ಡಿಂಗ್ ಹೇಗಿದೆ ಎಂದು ಹೇಳಿ ಪರೀಕ್ಷೆ ಮಾಡಿ ಹೇಳಿದಾಗ, ಇದು ವಾಸ ಮಾಡಲಿಕ್ಕೆ ಯೋಗ್ಯವಿಲ್ಲ. ಇಲ್ಲಿ ಅಪಾಯಕಾರಿಯಾಗಿದೆ, ಕೂಡಲೇ ಮನೆಯಲ್ಲಿರತಕ್ಕಂಥವರನ್ನು ತೆಗೆಸಬೇಕೆಂದು ಹೇಳುತ್ತಾರೆ. ಅಂದರೆ, ಕೇವಲ 20 ವರ್ಷಗಳಲ್ಲಿ ಕಟ್ಟಿರತಕ್ಕಂಥ ಮನೆಗಳು ವಾಸದ ಸ್ಥಿತಿಯಲ್ಲಿಲ್ಲವೆಂದರೆ ಯಾವ ಗುಣಮಟ್ಟದ ಕಟ್ಟಡ ನಿರ್ಮಾಣವಾಗಿದೆ. ಜೊತೆಯಲ್ಲಿ, ಇವತ್ತು ಅಲ್ಲಿ ಬಿದ್ದರೆ ಅದಕ್ಕೆ ಹೊಣೆ ಯಾರು? ದಯವಿಟ್ಟು ಸಂಬಂಧಪಟ್ಟವರು ಹೇಳಬೇಕು. ನಾನೀಗಾಗಲೇ ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡಿ ಅದನ್ನು ಪುನರ್ ನಿರ್ಮಾಣ ಮಾಡತಕ್ಕಂಥದ್ದು ಅಥವಾ ಸ್ಟ್ರಂಥನ್ ಮಾಡತಕ್ಕಂಥದ್ದರ ಬಗ್ಗೆ ಕೇಳಿದೆ. ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಉತ್ತರ ಕೊಡಬೇಕೆಂದು ಹೇಳಿ ಕೇಳುತ್ತೇನೆ.

ಶ್ರೀ ಅಂಜನಾಮೂರ್ತಿ (ವಸತಿ ಸಚಿವರು): ನೆ.ಲ.ನರೇಂದ್ರ ಬಾಬುರವರು ಕೇಳಿರುವ ವಿಚಾರ ಸತ್ಯ ಸಂಗತಿಯಿಂದ ಕೂಡಿದೆ. ನಾವು ಅದಕ್ಕೆ ಉತ್ತರ ಕೊಟ್ಟಿರುವ ಪ್ರಕಾರ, ಟಿ. ಅಗ್ರಹಾರ, ದಾಸರಹಳ್ಳಿ, ರಾಜಾಜಿನಗರ ವ್ಯಾಪ್ತಿಗೆ ಬರುವುದರಿಂದ 1982–83ನೇ ಸಲಿನಲ್ಲಿ 210 ಮನೆ ಕಟ್ಟಿದೆವು. ಈ ಮನೆಗಳನ್ನು ಹುಡ್ಕೋ ಸಂಸ್ಥೆಯ ಸಾಲದ ನೆರವಿನಿಂದ ಕಟ್ಟಿರುವುದು. ಅನುಮೋದನೆ ಗೊಂಡಂಥ ಫಲಾನುಭವಿಗಳಿಗೆ ಮನೆ ವಿತರಣೆಯಾಯಿತು. ಜವಾಬ್ದಾರಿಯನ್ನು ಅರ್ಥ ಮಾಡಿಕೊಳ್ಳಬೇಕು. ಅದರಲ್ಲಿ ವಾಸವಾಗಿರತಕ್ಕಂಥದವರು ಅದನ್ನು ರಿಪೇರಿ ಮತ್ತೊಂದು ಮಾಡಿಕೊಳ್ಳಬೇಕು. ಮತ್ತೆ ಗುಣಮಟ್ಟದ ಬಗ್ಗೆ 2002–03ರಲ್ಲಿ ಸ್ಟಾರ್ ಸ್ಟೀಲ್ ಇಂಡಿಯಾದವರಿಂದ ತನಿಖೆ ಮಾಡಿಸಿದಾಗ, ಅವರು ಕ್ಲಿಯರ್ ಆಗಿ ಹೇಳಿದ್ದಾರೆ, ಇದು ವಾಸ ಮಾಡಲು ಯೋಗ್ಯವಾಗಿಲ್ಲ. ಆದಷ್ಟು ಜಾಗ್ರತೆ ಅವರನ್ನೆಲ್ಲಾ ಮನೆಯಿಂದ ಹೊರಗಡೆ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡ ಬೇಕೆಂದು ಹೇಳಿದಾಗ, ನಮ್ಮ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಅವರಿಗೆ ಅನೇಕ ಸಾರಿ ತಿಳುವಳಿಕೆ ನೋಟೀಸ್ ಕೊಟ್ಟಿದ್ದರು. ಆದಷ್ಟು ಜಾಗ್ರತೆ ಜಾಗ ಖಾಲಿ ಮಾಡಿ, ಇಲ್ಲದಿದ್ದರೆ, ನಿಮ್ಮ ಜೀವಕ್ಕೆ ಅಪಾಯವಾಗುವ ಸಂಭವ ವಿದೆ, ಅದಕ್ಕೆ ನೀವೇ ಕಾರಣರಾಗುತ್ತೀರಿ ಎಂದು ಸಹ ಹೇಳಿದ್ದಾರೆ. ಇದಾದ ನಂತರ, ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಇದನ್ನು ಕಟ್ಟಿದವರು ಯಾರು, ಇದರ ಗುಣಮಟ್ಟದ ಬಗ್ಗೆ ತನಿಖೆಯಾಗಬೇಕೆಂದು, ಅದೊಂದು ಬೇರೆ ವಿಚಾರ ವನ್ನು ಇಟ್ಟುಕೊಳ್ಳೋಣ. ಆದರೆ ಒಟ್ಟು 40 ಕೊಳಚೆ ಪ್ರದೇಶಗಳನ್ನು ಈ ರಾಜಾಜಿನಗರ ಅಗ್ರಹಾರ ದಾಸರಳ್ಳಿಯದ್ದೂ ಸೇರಿದಂತೆ ಅದರ ನಿರ್ವಹಣೆಗೆ ಮತ್ತು ಮಿಕ್ಕ ಸೌಲಭ್ಯಕ್ಕೆ ನಗರಪಾಲಿಕೆಗೆ

ವಹಿಸಲಾಗಿದೆ. ಅದರ ಬಗ್ಗೆ ಅವರು ಮಾಹಿತಿ ಕೇಳಿದ್ದರು, ಯಾವಾಗ ಪಾಲಿಕೆಗೆ ವಹಿಸಿದ್ದಾರೆ ಎಂಬುದನ್ನೂ ನಾನು ಕೊಟ್ಟಿದ್ದೇನೆ. ಇದು 1997ರಲ್ಲಿ, ಇನ್ನೊಂದು ಮುಖ್ಯವಾದ ವಿಚಾರ, ಏನು ಇಲ್ಲಿ ವಾಸ ಮಾಡತಕ್ಕ ಜನರಿದ್ದಾರೆ ಅವರು ಇನ್ನೂ ಸರ್ಕಾರಕ್ಕೆ ಅಥವಾ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಡಬೇಕಾದಂಥ, ಸಂದಾಯ ಮಾಡಬೇಕಾ ದಂಥ ಹಣವನ್ನು ಪೂರ್ತಿ ಕಟ್ಟಿಲ್ಲ. 200 ಮನೆಗಳಿಂದ ಕೇವಲ 2 ಲಕ್ಷ ಮಾತ್ರ ಇದುವರೆಗೆ ಕಟ್ಟಿದ್ದಾರೆ, ಇನ್ನೂ ಬೇಕಾದಷ್ಟು ಇದೆ ಇಷ್ಟಿದ್ದರೂ ನಾವು ಅವರಿಗೆ ಎಲ್ಲ ರೀತಿ ಎಚ್ಚರಿಕೆ ಕೊಟ್ಟು ಜಾಗ್ರತೆಯಾಗಿ ಖಾಲಿ ಮಾಡಬೇಕು. ಬೇರೆ ಕಡೆ ಹೋಗಬೇಕು ಎಂದು ಹೇಳಿದರೂ ಅವರು ಹಠ ಮಾಡಿಕೊಂಡು. ಅಲ್ಲೆ ಇದ್ದಾರೆ. ಆದರೂ ಇದು ನಮ್ಮ ಕಾರ್ಪೋರೇಷನ್‌ಗೆ ಸೇರಿರುವುದರಿಂದ ಅಲ್ಲಿಂದ ಏನಾದರೂ ಇದು ಇಂಪ್ರೂವ್ ಆಗಬೇಕು ಎಂದು ಈ ಪ್ರಶ್ನೆಯನ್ನು ಕೇಳಿರುವಂಥ ಮಾನ್ಯ ನರೇಂದ್ರಬಾಬುರವರಿಗೆ ತಿಳಿಸಲು ತಮ್ಮ ಮೂಲಕ ಇಚ್ಛೆಪಡುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರ ಬಾಬು: ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ಕಟ್ಟಿರತಕ್ಕ ಮನೆ ಕೇವಲ 20 ವರ್ಷದಲ್ಲಿ ಬಿದ್ದುಹೋಗುತ್ತದೆ ಎಂದರೆ ಇದು ಯಾವ ಗುಣಮಟ್ಟದಲ್ಲಿ ಇರಬಹುದು? ಪವರ್ ಸಪ್ಲೈ ಇಲ್ಲ, ವಾಟರ್ ಸಪ್ಲೈ ಇಲ್ಲ, ಸ್ಯಾನಿಟರಿ ಇಲ್ಲ, ಬಿಲ್ಡಿಂಗ್‌ಗಳು ಯಾವ ತರಹ ಶಿಥಿಲಾವಸ್ಥೆಯಲ್ಲಿವೆ ಎಂದರೆ, ಅಷ್ಟು ಶೋಚನೀಯ. ಅಲ್ಲಿ ವಾಸ ಮಾಡುತ್ತಿರುವವರು ಪರಿಶಿಷ್ಟ ವರ್ಗದವರು, ಪರಿಶಿಷ್ಟ ಜಾತಿಯವರು, ಹಿಂದುಳಿದ ವರ್ಗದವರು ಮತ್ತು ಆರ್ಥಿಕವಾಗಿ ಹಿಂದುಳಿದ ಜನ. ಇಂತಹ ಮನೆಗಳು ಬೀಳುವಂಥ ಸ್ಥಿತಿಯಲ್ಲಿರಬೇಕಾದರೆ ಮನೆಗಳನ್ನು ಖಾಲಿ ಮಾಡಿ ಎಂದರೆ ಅವರನ್ನು ಮತ್ತೆ ಬೀದಿ ಪಾಲು ಮಾಡಲಿಕ್ಕಾಗುತ್ತದೆಯೇ? ಸರ್ಕಾರ ಇದರ ಬಗ್ಗೆ ಯಾವ ರೀತಿಯ ಕ್ರಮ ತೆಗೆದುಕೊಂಡು ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಿ, ಹಿಂದೆ ಗುಂಡೂರಾವ್ ಕಾಲೋನಿ ಎಂದು ಮಾಡಿದ್ದೀರಿ. ಇವತ್ತು ಅತಂತ್ರವಾಗಿ ಮಹಾನಗರ ಪಾಲಿಕೆ, ಕೊಳಚೆ ನಿರ್ಮೂಲನ ಮಂಡಳಿ.....

ಶ್ರೀ ಅಂಜನಾಮೂರ್ತಿ:– ಅಲ್ಲಿ ತೊಂದರೆಗೊಳಗಾಗಿರತಕ್ಕಂಥ, ಅಲ್ಲಿ ವಾಸ ಮಾಡತಕ್ಕಂಥ ಜನಗಳಿಗೆ ಒಳ್ಳೆಯ ಸೌಲಭ್ಯ...

ಉಪಾಧ್ಯಕ್ಷರು:– ಒಂದ್ನಿಮಿಷ. ಅವರೇನು ಹೇಳುತ್ತಾರೆ ಸ್ವಲ್ಪ ಕೇಳಿ. ನರೇಂದ್ರಬಾಬುರವರೆ ನಿಮ್ಮ ಪ್ರಶ್ನೆಗೆ ಅರ್ಧ ಗಂಟೆ ಸಮಯ ತೆಗೆದುಕೊಂಡರೆ ಹೇಗೆ? ಇದು ಝೀರೋ ಹವರ್ ಒಂದ್ನಿಮಿಷಕ್ಕಿಂತ ಹೆಚ್ಚು ಮಾತನಾಡುವ

ಹಾಗಿಲ್ಲ ನೀವು ಅರ್ಧ ಗಂಟೆ ಮಾತನಾಡಿದಿರಲ್ಲ... ನೀವು ಅರ್ಧ ಗಂಟೆ ಮಾತನಾಡಿದರೆ ಇಲ್ಲಿ ಉತ್ತರ ಸಿಗುತ್ತದೆಯೇ? ಯಾವುದಾದರೊಂದು ಪ್ರಶ್ನೆ ಕೇಳಿ. ಆ ಪ್ರಶ್ನೆಗೆ ಆದರೆ ನೀವು ಉತ್ತರ ಕೊಡಿ. ಇಲ್ಲವೆಂದರೆ, ಸುಮ್ಮನೆ ಕುಳಿತುಕೊಳ್ಳಿ. ನೀವೂ ಕೂಡ ಒಂದು ಗಂಟೆ ಮಾತನಾಡುತ್ತೀರಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು:– ನಾಳೆ ದಿವಸ ಬಿದ್ದರೆ ಸರ್ಕಾರದ ಹೊಣೆ ಬರುತ್ತದೆ. ಸರ್ಕಾರದಿಂದ ಒಂದು ಭರವಸೆ ಕೊಡಿಸಿ, ಪರ್ಯಾಯ ವ್ಯವಸ್ಥೆ ಮಾಡಿಸಿ.

ವಿಷಯ: ಬೆಂಗಳೂರು ಸುತ್ತಮುತ್ತಲಿನ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಅಭಿವೃದ್ಧಿ ಶುಲ್ಕವನ್ನು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಕುರಿತು.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನ ಸುತ್ತಮುತ್ತಲೂ ಬರುವ ಗ್ರಾಮೀಣ ಪ್ರದೇಶದ ಹದಗೆಟ್ಟ ರಸ್ತೆಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಇಷ್ಟಪಡುತ್ತಿದ್ದೇನೆ. ಈ ಕುರಿತಂತೆ ಸರ್ಕಾರ ಈಗಾಗಲೆ ನನಗೆ ಉತ್ತರ ಕೊಟ್ಟಿದೆ. ಬೆಂಗಳೂರಿನ ಸುತ್ತಮುತ್ತಲಿರುವ ಹಳ್ಳಿಗಳು heavy trafficನಿಂದಾಗಿ ತೊಂದರೆ ಅನುಭವಿಸುತ್ತಿವೆ. ಈ ಹಳ್ಳಿಗಳೂ ಬೇರೆ ಹಳ್ಳಿಗಳ ತರಹವಲ್ಲ. ಈ ಹಳ್ಳಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕೆಗಳು ಬರುವುದಕ್ಕೆ ಸರ್ಕಾರ ಅನುಮತಿ ನೀಡಿದೆ. ಈ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 748 ಕಿಲೋಮೀಟರ್ ಗಳಷ್ಟು ರಸ್ತೆ ಬರುತ್ತಿದೆ. ಆದರೆ, ಪ್ರತಿ ಕ್ಷೇತ್ರಕ್ಕೂ ರಸ್ತೆ ಅಭಿವೃದ್ಧಿಗೆಂದು ಸರ್ಕಾರ ಕೊಟ್ಟಿರುವುದು ಕೇವಲ ಇಪ್ಪತ್ತು ಲಕ್ಷ ಮಾತ್ರ. ಇಲ್ಲಿನ ಕೈಗಾರಿಕೆಗಳಿಂದ ಸರ್ಕಾರಕ್ಕೆ ಬಹಳಷ್ಟು ಟ್ಯಾಕ್ಸ್ ಬರುತ್ತದೆ. ಆದರೆ, ಈ ಪ್ರದೇಶಗಳಲ್ಲಿರುವ ಯಾವುದೇ ರಸ್ತೆಗಳನ್ನು ಸರ್ಕಾರ ಇದುವರೆಗೂ ಅಭಿವೃದ್ಧಿಪಡಿಸಿಲ್ಲ. ಕಳೆದೆರಡು ವರ್ಷಗಳಿಂದ ಜಿಲ್ಲಾ ಪರಿಷತ್ ಸುಮಾರು ಎಂಟು ಕೋಟಿ ರೂಪಾಯಿಗಳ ನಷ್ಟದಲ್ಲಿದೆ. ಆದರೂ ಜಿಲ್ಲಾ ಪರಿಷತ್ ವತಿಯಿಂದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಾಗಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿರುವ ವ್ಯವಸ್ಥೆಯನ್ನು ನೀವು ಹೇಗೆ ಸರಿಪಡಿಸುತ್ತೀರಿ? ಈ ಪ್ರದೇಶ ಬಿ.ಡಿ.ಎ. ವ್ಯಾಪ್ತಿಗೆ ಬರಲಿದ್ದು, ಸುಮಾರು 200–300 ಫ್ಲಾಟುಗಳನ್ನು ಕಟ್ಟುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಅಭಿವೃದ್ಧಿ ಶುಲ್ಕವೆಂದು ಸುಮಾರು 2 ರಿಂದ 3 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿ.ಡಿ.ಎ. ತೆಗೆದುಕೊಳ್ಳುತ್ತಿದೆ. ಆದರೆ,